**ದಿನಾಂಕಃ 31-07-2019 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**
ಪಾಟೀಸವಾಲು ಎದುರುದಾರರ ಪರ ಶ್ರೀ ಎಂ ಎನ್ ವಕೀಲರಿಂದಃ-

ಅಪಘಾತ ಕಾಲಕ್ಕೆ ಬೈಕ್ ನ್ನು ಚಲಾಯಿಸುತ್ತಿದ್ದೆ . ನನಗೆ ಬೈಕ್ ನಡೆಸಲು ಡಿ ಎಲ್ ಮತ್ತು ನನ್ನ ಬೈಕ್ ಗೆ ವಿಮೆ ಇದೆ . ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ . ಅಪಘಾತ ಸ್ಥಳ ಹಾಸನ ಮತ್ತು ಅರಸೀಕೆರೆ ರಸ್ತೆಯ ಹೆಚ್ ಪಿ ಪೆಟ್ರೋಲ್ ಬಂಕ್ ಬಳಿ ಇರುತ್ತದೆ . ಅದರ ಪಕ್ಕದಲ್ಲಿ ಶ್ರೀ ರಾಮಾಂಜನೇಯ ಸಿರಮಿಕ್ಸ್ ಎಂಡ್ ಟೈಲ್ಸ್ ಅಂಗಡಿ ಇರುತ್ತದೆ ಎಂದರೆ ಸರಿ. ಅಪಘಾತ ಸದರಿ ಟೈಲ್ಸ್ ಅಂಗಡಿ ಮುಂದೆ ಆಗಿರುತ್ತದೆ ಎಂದರೆ ಸರಿ . ಸಾಕ್ಷಿ ಗೆ ನಿಪಿ-5 ರ ಅಪಘಾತ ಸ್ಥಳದ ನಕಾಶೆಯನ್ನು ತೋರಿಸಲಾಗಿ ನಕಾಶೆಯಲ್ಲಿರುವ ಸಂಗತಿಗಳನ್ನು ಸಾಕ್ಷಿ ಒಪ್ಪಿರುತ್ತಾರೆ. ಆ ದಿನ ನಾವು ಅರಸೀಕೆರೆ ಕಡೆಯುಂದ ಹಾಸನದ ಡೈರಿ ಸರ್ಕಲ್ ಕಡೆ ಬರುತ್ತಿದ್ದೆವು. ಅದರಂತೆಯೇ ನಿಪಿ-5 ರ ಪ್ರಕಾರ ಅಪಘಾತ ಸ್ಥಳ ನಾವು ಹೋಗುತ್ತಿದ್ದ ರಸ್ತೆಯ ಬಲಭಾಗದಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದು ಬಸ್ ಬಂದು ಡಿಕ್ಕಿಪಡಿಸಿ ನಮಗೆ ಅಪಘಾತವಾಗಿರುತ್ತದೆ . ಈ ಅಪಘಾತ ನನ್ನ ಅಜಾಗೂರೂಕತೆಯಿಂದ ಆಗಿರುತ್ತದೆ ಎಂದರ ಸರಿಯಲ್ಲ. 1 ನೇ ಎದುರುದಾರ ಬಸ್ ನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಪರಿಹಾರ ಕೊಡುವುದನ್ನು ತಪ್ಪಿಸಿಕೊಳ್ಳಲು ಈ ಅಪಘಾತ ಬಸ್ ನ ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೂ ಬಸ್ ನ ಚಾಲಕನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ.ಸ.ಇದೆ.

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹಾಸನ.**